# ಪ್ರಬಂಧ

ಗುಬ್ಬಿಗಳಿಗಾಗಿ ಇಟ್ಟಿದ್ದ ರಾಗಿಯ ಸಣ್ಣ ಕುಡಿಕೆಯೊಂದು ಕೆಳಕ್ಕೊರಗಿ ಕಾಳುಗಳೆಲ್ಲ ಚಲ್ಲಾಪಿಲ್ಲಿಯಾಗಿವೆ. ದಪ್ಪನೆಯ ರಟ್ಟಿನ ಮೇಲೆ ಬರೆದ 'To Let' ಫಲಕ ಮಳೆಗೆ ನೆನೆದು ಈಗೋ ಆಗೋ ಕೆಳಗೆ ಬೀಳುವಂತಾಗಿದೆ.

'ಮುನ್ಸಿಪಾಲಿಟಿ ಗಿಡ'ವೊಂದರಿಂದ ಉದುರಿದ ಕೆಂಪನೆಯ ಹೂವುಗಳು ರಾಶಿ ರಾಶಿಯಾಗಿ ನೆಲದ ಮೇಲೆ ಹರಡಿಕೊಂಡಿವೆ; ಬೊಗಸೆಯಲ್ಲಿ ತೆಗೆದುಕೊಳ್ಳಲೇನೋ ಎನ್ನುವಂತೆ. ಹಕ್ಕಿಗಳ ಗುಂಪೊಂದು ನಿಶ್ಯಬ್ದವಾಗಿ ಹಾರಿ ಹೋಗುತ್ತಿದೆ. ರಸ್ತೆಯಲ್ಲಿ ನಿಂತ ನೀರನ್ನು ತುಳಿಯದಂತೆ ಫುಟ್‌ಪಾತ್ ಮೇಲೆ ಹೆಜ್ಜೆ ಹಾಕುತ್ತಿದ್ದಾರೆ ಹಿರಿಯರು. ಅದೇ ರಸ್ತೆಯ ನೀರನ್ನು ಕಾಲಿನಿಂದೊದ್ದು ಅಲೆ ಎಬ್ಬಿಸುತ್ತಿದ್ದಾನೆ ಹುಡುಗನೊಬ್ಬ. ಮುಖದ ಮೇಲೆ ಕಪ್ಪು ಪಟ್ಟೆಯಿರುವ ನಾಯಿಯೊಂದು ಶ್ವೇತವರ್ಣದ ನಾಯಿಯೊಂದಿಗೆ ಸರಸವಾಡುತ್ತಿದೆ.

ಎಂತಹ ಕಾಲವಿದು! ಒಣಗಿದೆಲೆಗಳನ್ನು ಕೂಡ ಚಿಗುರಿಸುವಂತಹ ಕಾಲ. ಶಕ್ತಿಯುಡಿಗಿದ ಮುದುಕಿಯಲ್ಲಿ ಕೂಡಾ ದವಡೆಯ ನಡುಕದ ಮೂಲಕ ಚೈತನ್ಯ ತುಂಬುವ ಕಾಲ. ಕಲ್ಲು ಬಂಡೆಗಳಲ್ಲೂ ಮೊಳಕೆ ಮೂಡುವ ಕಾಲ. ಎಲ್ಲರೂ ನಿರೀಕ್ಷಿಸಿದ ಕಾಲ. ರೈತರು ಭೂಮಿಯನ್ನು ಮತ್ತಷ್ಟು ಆತ್ಮೀಯವಾಗಿ ಮೈದಡವುವ ಕಾಲ.

ಫೋನಿನಲ್ಲಿ ಬಾಪು ಹೇಳಿದ ಮಾತುಗಳು ನೆನಪಾದವು, 'ನಾರಿನೆತ್ತರಕ್ಕೆ ಮಡಿ ಉತ್ತುವುದು ಆಗಿದೆ. ಹೇಗಿದ್ದರೂ ಇಂದು ಅಮಾವಾಸ್ಯೆ. ನಾಳೆ ಪಾಡ್ಯ. ನಾಡಿದ್ದು ಗುರುವಾರ ನನಗೆ ಘಾತವಾರ. ಹಾಗಾಗಿ ಶುಕ್ರವಾರ ನೆನೆಹಾಕುತ್ತೇನೆ ಕವಳೆ.'

ಆಕಾಶವು ಯಾವ ಗುಟ್ಟನ್ನೂ ಬಿಟ್ಟುಕೊಡದಂತೆ ಮೌನವಾಗಿ ಇರುವಂತಿದೆ. ಸೂಕ್ಷ್ಮವಾಗಿ ಗಮನಿಸಿದರೆ, ಬಿಳಿವರ್ಣದ ದಟ್ಟ ಮೋಡಗಳು ನಿಧಾನವಾಗಿ ಚಲಿಸುತ್ತಿರುವಂತಿದೆ. ಇಂದು ಕೂಡಾ ಮಳೆ ಬರಬಹುದೇ?

ನೆನ್ನೆ ಸಂಜೆ ಹೀಗೇ ಯಾವುದೋ ಕೆಲಸದ ಮೇಲೆ ಹೋಗುತ್ತಿದ್ದೆ. ಆಕಾಶವು ಇದ್ದಕ್ಕಿದ್ದಂತೆ ಮೃದುವಾಯಿತು. ಮಗುವೊಂದು ತಂದೆಯ ಡೈರಿಯನ್ನು ಕಸಿದುಕೊಂಡು ಅಸ್ಪಷ್ಟ ಚಿತ್ರಗಳನ್ನು ಗೀಚಿದಂತೆ... ಮೋಡಗಳು ಹೊಸಹೊಸ ರೂಪಗಳನ್ನು ತಾಳತೊಡಗುತ್ತಿವೆ. ಕಪ್ಪುವರ್ಣದಲ್ಲಿಯೇ ಎಷ್ಟೆಷ್ಟೋ ಛಾಯೆಗಳು.

ನಿರ್ಮಾಣ ಹಂತದಲ್ಲಿರುವ ಕಟ್ಟಡವೊಂದರ ಮೇಲೆ ಗೋಣಿಚೀಲವೊಂದು ತೂಗಾಡುತ್ತಿದೆ. ಗಾಳಿ ಸುಯ್ಯೆಂದು ಕಿವಿಗಳಲ್ಲಿ ತೂರಿ ಕಚಗುಳಿಯಿಡುತ್ತಿದೆ. ಅದ್ಭುತವೊಂದು ಯಾವ ಕ್ಷಣದಲ್ಲಾದರೂ ಸಂಭವಿಸಬಹುದೇನೋ ಅನ್ನಿಸುತ್ತಿದೆ. ಇಂತಹ ವಾತಾವರಣದಲ್ಲಿ ನಾವು ಯಾರನ್ನಾದರೂ ಕ್ಷಮಿಸಿಬಿಡಬಹುದು.

ಎಲ್ಲಿಂದಲೋ ಬಂದ ಮೊದಲ ಹನಿಯೊಂದು ನನ್ನ ಕೈಯನ್ನು ತಾಕಿದ ಅನುಭವ. ಓಹೋ... ಮಳೆ ಬರುವಂತೆಯೇ ಇದೆ. ಕೆಲವು ಹನಿಗಳು ಅವಸರಕ್ಕೆ ಬಿದ್ದಿವೆಯೇನೋ ಎನ್ನುವಂತೆ ನನ್ನ ಮೈಮೇಲೆ ಬಿದ್ದಾಗ, ಅದ್ಭುತವೊಂದು ನಿಜವಾಗಿಯೂ ನಡೆದುಹೋಗುತ್ತದೆಯೇನೋ ಎನ್ನಿಸಿಬಿಟ್ಟಿತು. ಅಂದಹಾಗೆ... ಮಳೆ ಸುರಿಯುವುದಕ್ಕಿಂತ ಅದ್ಭುತ ಇನ್ನೇನಿರಲಿಕ್ಕೆ ಸಾಧ್ಯ?

ಮುಂಜಾಗ್ರತೆಯಾಗಿ ನನ್ನಲ್ಲಿದ್ದ ಸೆಲ್‌ಫೋನು, ಹಣ ಮತ್ತು ಕಾಗದಪತ್ರಗಳನ್ನು ಪ್ಲಾಸ್ಟಿಕ್ ಕವರಿನಲ್ಲಿ ಹುಷಾರಾಗಿ ಸುತ್ತಿ ಜೇಬಿನಲ್ಲಿಟ್ಟುಕೊಂಡೆ.

ಸುತ್ತಮುತ್ತಲಿನ ಜನರಲ್ಲಿ ಸಂಚಲನೆ ಶುರುವಾಯಿತು. ಮಳೆ ಮೊದಲಾಗುವ

